## ಮೂರನೆಯ ರೂಪಣಾತ್ಮಕ ಪರೀಕ್ಷೆ-2022-23

## (ಕಲಿಕಾ ಫಲ ಆಧಾರಿತ)

**9ನೇ ತರಗತಿ** **ಕನ್ನಡ** **ಅಂಕಗಳು: 20**

**ಈ ಕೆಳಗಿನ ಪ್ರಶ್ನೆಗಳಿಗೆ ಸೂಕ್ತವಾದ ಉತ್ತರ ಆರಿಸಿ ಬರೆಯಿರಿ** 1*4=4

**1. ಕಪಟಿ ಸಿಂಹಕ್ಕೆ ಸಹಾಯ ಮಾಡಿದವರು ;**

ಎ) ಮರಕುಟಿಕ ಬಿ) ಕಾಗೆ ಸಿ) ಕತ್ತೆ ಡಿ) ಜೇಡ

**2. ಕಾಗೆಯ ಸೇಡು ಕಥೆಯ ಮೌಲ್ಯ ;**

ಎ) ಅಧಿಕಾರ ಮತ್ತು ಶಕ್ತಿ ಇದ್ದಾಗ ಅಹಂಕಾರದಿಂದ ವರ್ತಿಸಬೇಕು.

ಬಿ) ಅಧಿಕಾರ ಮತ್ತು ಶಕ್ತಿ ಇದ್ದಾಗ ಅಹಂಕಾರ ಬರುತ್ತದೆ.

ಸಿ) ಅಧಿಕಾರ ಮತ್ತು ಶಕ್ತಿ ಅಹಂಕಾರದಿಂದ ಬರುತ್ತದೆ.

ಡಿ) ಅಧಿಕಾರ ಮತ್ತು ಶಕ್ತಿ ಇದ್ದಾಗ ಅಹಂಕಾರದಿಂದ ವರ್ತಿಸಬಾರದು.

**3. ಓಬವ್ವ ಸ್ವರಕ್ಷಣಾ ತರಬೇತಿ ನೀಡುವುದು ;**

ಎ) ಮಹಿಳಾ ಯೋಧರ ನೇಮಕಾತಿಗಾಗಿ ಬಿ) ಮಹಿಳಾ ಸಬಲೀಕರಣಕ್ಕಾಗಿ

ಸಿ) ಮಹಿಳಾ ಪೈಲಟ್ ಆಗಿಸಲು ಡಿ) ಸೈನ್ಯಕ್ಕೆ ಸೇರಿಸಲು

**4. ಕುವೆಂಪುರವರ ಆತ್ಮ ಚರಿತ್ರೆ ;**

ಎ) ಊರುಕೇರಿ ಬಿ) ಮೈ ಎಕ್ಸಪೀರಿಮೆಂಟ್ ವಿಥ್ ಲೈಫ್

ಸಿ) ನೆನಪಿನ ದೋಣಿಯಲ್ಲಿ ಡಿ) ನನ್ನ ಭಯಾಗ್ರಫಿ

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.** 1*3=3

5. ಗೋವಿನ ಹಾಡು ಪದ್ಯದಲ್ಲಿ ಹೇಳಿರುವಂತೆ ಸತ್ಯವೆಂದರೆ ಯಾರ್ಯಾರು ?

6. ದಿವಾನ್ ಮಿರ್ಜಾ ಸಾಹೇಬರಿಗೆ ಏಕೆ ಕಳವಳವಾಗಿತ್ತು ?

7. ರಾತ್ರಿ ಹೊತ್ತು ಹುಣಸೆ ಮರದ ಕೆಳಗೆ ಮಲಗುವುದು ಕ್ಷೇಮವಲ್ಲ ಕಾರಣವೇನು ?

**ಈ ಕೆಳಗಿನ ಪ್ರಶ್ನೆಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ** 2*1=2

8. ಬಿದಿರಿನ ಉಪಯೋಗಗಳನ್ನು ಪಟ್ಟಿ ಮಾಡಿರಿ.

**9. ಈ ಕೆಳಗಿನ ಚಿತ್ರವನ್ನು ನೋಡಿ ಸೂಕ್ತವಾದ ಸಂಭಾಷಣೆ ರಚಿಸಿ.** 3*1=3



**ಈ ಕೆಳಗಿನ ಗದ್ಯಭಾಗವನ್ನು ಓದಿ, ಗ್ರಹಿಸಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.** **4*1=4**

10. ಒಂದು ಸಲ ಸಂತ ಇಬ್ರಾಹಿಮನು ದೇಶ ಸಂಚಾರಕ್ಕೆ ಹೊರಟನು. ಸಂಚರಿಸುತ್ತ ಒಬ್ಬ ಧನಿಕರ ತೋಟಕ್ಕೆ ಬಂದನು. ಆ ಧನಿಕನು ಸಂತ ಇಬ್ರಾಹಿಮನ ಸಾಧಾರಣ ಉಡುಪನ್ನು ಕಂಡು ಅವನನ್ನು ಒಬ್ಬ ಸಾಮಾನ್ಯ ಮನುಷ್ಯನೆಂದು ಭಾವಿಸಿದನು. ಆ ಧನಿಕನಿಗೆ ಅವನು ತೋಟ ಕಾಯಲು ಒಬ್ಬ ಆಳು ಬೇಕಾಗಿದ್ದನು. 'ನೀನು ನನ್ನ ತೋಟದ ಕಾವಲು ಮಾಡುವೆಯಾ?' ಎಂದು ಆ ಧನಿಕನು ಇಬ್ರಾಹಿಮನನ್ನು ಕೇಳಿದನು. ಇಬ್ರಾಹಿಮನಿಗೆ ಆ ತೋಟದ ಶಾಂತ ವಾತಾವರಣ ತುಂಬ ಹಿಡಿಸಿತು. ಏಕಾಂತದಲ್ಲಿ ದೇವರ ಧ್ಯಾನ ಮಾಡಲು ಅವನಿಗೆ ಸೂಕ್ತವಾದ ಸ್ಥಳವೆನಿಸಿತು. ಆದ್ದರಿಂದ ಧನಿಕನ ಮಾತನ್ನು ಕೂಡಲೇ ಒಪ್ಪಿಕೊಂಡನು. ಹೀಗೆ ಬಹಳ ದಿವಸಗಳು ಕಳೆದುಹೋದವು. ಇಬ್ರಾಹಿಮನು ತುಂಬ ಮುತುವರ್ಜಿಯಿಂದ ತೋಟದ ಕಾವಲು ಮಾಡುತ್ತಿದ್ದನು. ಒಂದು ದಿನ ಆ ಧನಿಕನು ತನ್ನ ಕೆಲವು ಮಿತ್ರರೊಂದಿಗೆ ತನ್ನ ತೋಟಕ್ಕೆ ಬಂದನು. ಮಾವಿನ ಮರದಲ್ಲಿ ಮಾವಿನ ಹಣ್ಣುಗಳಾಗಿದ್ದವು. ಧನಿಕನು ಇಬ್ರಾಹಿಮನಿಗೆ ಕೆಲವು ಮಾವಿನ ಹಣ್ಣುಗಳನ್ನು ಕಿತ್ತು ತರುವಂತೆ ಹೇಳಿದನು. ಇಬ್ರಾಹಿಮನು ಒಂದು ಮರದಿಂದ ಕೆಲವು ಹಣ್ಣುಗಳನ್ನು ಕಿತ್ತು ತಂದನು. ಆದರೆ ಅವನು ಕಿತ್ತು ತಂದ ಹಣ್ಣುಗಳೆಲ್ಲ ಹುಳಿಯಾಗಿದ್ದವು. ಆಗ ಧನಿಕನು ಇಬ್ರಾಹಿಮನನ್ನು ಕುರಿತು 'ಹಲವು ದಿನಗಳಿಂದ ನನ್ನ ತೋಟದ ಕಾವಲು ಕಾಯುತ್ತಿರುವೆ. ಆದರೆ ಯಾವ ಮರದ ಹಣ್ಣು ಹುಳಿಯಾಗಿದೆ. ಯಾವ ಮರದ ಹಣ್ಣು ಸಿಹಿಯಾಗಿದೆ ಎಂದು ನಿನಗೆ ಗೊತ್ತಿಲ್ಲವೇ? ಎಂದು ಕೇಳಿದನು. ಧನಿಕನ ಮಾತನ್ನು ಕೇಳಿ ಇಬ್ರಾಹಿಮನು ನಗತೊಡಗಿದನು. ಅವನು ಏಕೆ ನಗುತ್ತಿರುವನೆಂದು ಧನಿಕನಿಗೆ ತಿಳಿಯಲಿಲ್ಲ. 'ನೀನು ಏಕೆ ನಗುತ್ತಿರುವೆ?' ಎಂದು ಧನಿಕನು ಇಬ್ರಾಹಿಮನಿಗೆ ಕೇಳಿದನು. ಆಗ ಇಬ್ರಾಹಿಮನು 'ಒಡೆಯರೇ, ನೀವು ನನ್ನನ್ನು ನೇಮಿಸಿರುವುದು ತೋಟವನ್ನು ಕಾಯುವುದಕ್ಕೆ, ಮಾವಿನ ಹಣ್ಣುಗಳನ್ನು ತಿನ್ನುವುದಕ್ಕಲ್ಲ. ನಿಮ್ಮ ಆಜ್ಞೆ ಇಲ್ಲದೆ ನಾನು ಹಣ್ಣುಗಳನ್ನು ತಿನ್ನಲು ಹೇಗೆ ಸಾಧ್ಯ? ನಾನು ಹಣ್ಣುಗಳನ್ನು ತಿಂದೇ ಇಲ್ಲ ಎಂದ ಮೇಲೆ ನನಗೆ ಯಾವ ಮರದ ಹಣ್ಣು ಹುಳಿ, ಯಾವ ಮರದ ಹಣ್ಣು ಸಿಹಿ ಎಂದು ಹೇಗೆ ಗೊತ್ತಾದಿತು? ಎಂದು ಕೇಳಿದನು. ಇಬ್ರಾಹಿಮನ ಪ್ರಾಮಾಣಿಕತೆಯನ್ನು ಕಂಡು ಧನಿಕನು ತಲೆದೂಗಿದನು ಮತ್ತು ತನ್ನ ನಡವಳಿಕೆಗಾಗಿ ಇಬ್ರಾಹಿಮನಲ್ಲಿ ಕ್ಷಮೆ ಯಾಚಿಸಿದನು.

**ಪ್ರಶ್ನೆಗಳು**

1) ಧನಿಕ ಕೇಳಿದ ಸಿಹಿ ಮತ್ತು ಹುಳಿ ಹಣ್ಣುಗಳ ವಿಚಾರದಲ್ಲಿ ಇಬ್ರಾಹಿಮ್‌ನ ಪ್ರತ್ಯುತ್ತರವೇನಾಗಿತ್ತು ?

2) ಇಬ್ರಾಹಿಮ ತೋಟದ ಕಾವಲಿಗೆ ಒಪ್ಪಲು ಕಾರಣಗಳೇನು ?

**ಈ ಕೆಳಗಿನ ಪ್ರಶ್ನೆಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿ** **4*1=4**

11. ಅ) ನೀವು ಇಷ್ಟಪಡುವ ಯಾವುದಾದರೊಂದು ಸ್ಥಳ, ಪ್ರಾಣಿ, ವಸ್ತುವೊಂದನ್ನು ಕುರಿತು ಪ್ರಬಂಧ ಬರೆಯಿರಿ.

**ಅಥವಾ**

ಆ) ನಿಮ್ಮ ಶಾಲೆಯಲ್ಲಿ ಆಚರಿಸಿದ ಕನ್ನಡ ರಾಜ್ಯೋತ್ಸವದ ಬಗ್ಗೆ ದಿನ ಪತ್ರಿಕೆಯಲ್ಲಿ ಪ್ರಕಟಿಸಲು ವರದಿಯೊಂದನ್ನು ಸಿದ್ದಪಡಿಸಿ.